# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 904

ಸದಸ್ಯರ ಹೆಸರು : ಶ್ರೀ ಸಿ.ಪಿ.ಯೋಗೇಶ್ವರ್
(ನಾಮನಿರ್ದೇಶನ ಹೊಂದಿದವರು)

ಉತ್ತರಿಸುವ ದಿನಾಂಕ : 24.07.2024

ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕು, ವಿರುಪಸಮುದ್ರ ಗ್ರಾಮದ ಸರ್ವೆ ನಂ.236/1, 236/2 ಹಾಗೂ 236/3 ರಲ್ಲಿ ದಿನಾಂಕ:25.09.2023 ರಂದು ದಸ್ತವೇಜು 3157/2023-24ರ ಲೀಸ್ ಡೀಡ್ ಮಾಡಿರುವುದು ಕಾನೂನು ಬಾಹಿರವಾಗಿದೆಯೆಂದು ಸರ್ಕಾರ ಈ ಹಿಂದೆ ಉತ್ತರ ನೀಡಿದ್ದು. ಸದರಿ ಲೀಸ್ ಡೀಡ್‌ಗೆ ವಾಣಿಜ್ಯ ಉದ್ದೇಶಕ್ಕೆ ಮುಂದಿನ ದಿನಗಳಲ್ಲಿ ಎನ್.ಓ.ಸಿ ವಿತರಿಸದಂತೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು; (ವಿವರ ನೀಡುವುದು) | ಲೀಸ್ ಡೀಡ್ ಮಾಡಿರುವುದು ಕಾನೂನು ಬಾಹಿರವಾಗಿದೆಯೆಂದು ನೋಂದಣಿ ಮುದ್ರಾಂಕ ಶಾಖೆಯು ಕಡತ ಸಂಖ್ಯೆ: RD 29 MNSA 2024ರಲ್ಲಿ ಸದನಕ್ಕೆ ಉತ್ತರವನ್ನು ಒದಗಿಸಿರುತ್ತದೆ.<br><br>ಸದರಿ ಲೀಸ್ ಡೀಡ್ ಖಾಸಗಿ ವ್ಯಕ್ತಿಗಳ ನಡುವೆ ಮಾಡಿಕೊಂಡಿರುವ ಒಪ್ಪಂದಗಳಾಗಿದ್ದು, ಜಿಲ್ಲಾಧಿಕಾರಿ ಕಛೇರಿ ವ್ಯಾಪ್ತಿಯಲ್ಲಿ ನಡೆದಿರುವುದಿಲ್ಲ, ಆದಕಾರಣ ಸದರಿ ಲೀಸ್ ಡೀಡ್ ಸಂಬಂಧ ಸಕ್ಷಮ ಪ್ರಾಧಿಕಾರದಲ್ಲಿ ಪರಿಹಾರ ಕಂಡುಕೊಳ್ಳಲು ತಿಳಿಸಿ ಜಿಲ್ಲಾಧಿಕಾರಿ ಕಛೇರಿಯಲ್ಲಿ ಹಿಂಬರಹ ನೀಡಿರುತ್ತಾರೆ. |
| ಆ) | ಸದರಿ ಲೀಸ್ ಡೀಡ್ ಬಗ್ಗೆ ತುಮಕೂರು ಜಿಲ್ಲಾಧಿಕಾರಿಗಳ ಕಚೇರಿ ಉಪ ವಿಭಾಗಾಧಿಕಾರಿಗಳ ಕಚೇರಿ ಹಾಗೂ ತಾಲ್ಲೂಕು ಕಚೇರಿಗಳಲ್ಲಿ ಬಂದಿರುವ ದೂರುಗಳ ಸಂಖ್ಯೆ ಎಷ್ಟು; (ವಿವರ ನೀಡುವುದು) | ಈ ಪ್ರಕರಣದ ಬಗ್ಗೆ ಜಿಲ್ಲಾಧಿಕಾರಿಗಳ ಕಛೇರಿಗೆ 07 ದೂರುಗಳು, ಮಧುಗಿರಿ ಉಪವಿಭಾಗಾಧಿಕಾರಿಗಳ ಕಛೇರಿಗೆ 01 ದೂರು ಪಾವಗಡ ತಾಲ್ಲೂಕು ಕಛೇರಿಗೆ 04 ದೂರುಗಳು ಹಾಗೂ ರಾಜಸ್ವ ನಿರೀಕ್ಷಕರು, ಕಸಬಾ ಹೋಬಳಿ, ಪಾವಗಡ ತಾಲ್ಲೂಕು ರವರಿಗೆ 01 ದೂರು ಒಟ್ಟು 13 ದೂರುಗಳು ಸ್ವೀಕೃತವಾಗಿರುತ್ತವೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಇ) | ಬಂದಿರುವ ದೂರುಗಳ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? ಸಂಪೂರ್ಣ ಮಾಹಿತಿ ಒದಗಿಸುವುದು) | ದೂರುದಾರರು ಲೀಸ್ ಡೀಡ್ ಪ್ರಶ್ನಿಸಿ ದೂರು ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಲೀಸ್ ಡೀಡ್ ರದ್ದುಪಡಿಸುವ ಅಧಿಕಾರ ಕಂದಾಯ ಇಲಾಖೆಯ ವ್ಯಾಪ್ತಿಗೆ ಬಾರದೇ ಇರುವುದರಿಂದ ಸಕ್ಷಮ ಪ್ರಾಧಿಕಾರವಾದ ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿಗೆ ಮೇಲ್ಮನವಿ ಸಲ್ಲಿಸಿ ಪರಿಹಾರ ಕಂಡುಕೊಳ್ಳಬೇಕಾಗಿರುತ್ತದೆ.<br>ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕು, ವಿರುಪಸಮುದ್ರ ಗ್ರಾಮದ ಸರ್ವೆ ನಂ.236/1, 236/2 ಹಾಗೂ 236/3ರ ಲೀಸ್ ಡೀಡ್‌ಗೆ ಸಂಬಂಧಿಸಿದಂತೆ ತಹಶೀಲ್ದಾರ್, ಪಾವಗಡ ತಾಲ್ಲೂಕುರವರು ಹಿಂಬರಹ ನೀಡಿರುತ್ತಾರೆ. ಹಿಂಬರಹದ ಪ್ರತಿಯನ್ನು **ಅನುಬಂಧ**ದಲ್ಲಿ ನೀಡಲಾಗಿದೆ. |

ಆರ್‌ಡಿ 68 ಎಲ್‌ಜಿಟಿ 2024

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು